# ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 29/2025

ಪಿರ್ಯಾದಿಃ ಕರ್ನಾಟಕ ಸರಕಾರ

- ವಿರುದ್ಧ -

ಆರೋಪಿತರುಃ

1) ಮೂರಾರಿ ನಾರಾಯಣ ಗಾಂವಕರ್,
ಪ್ರಾಯಃ 71 ವರ್ಷ, ಉಃ ಕೂಲಿ ಕೆಲಸ,
ಸಾಃ ಬೊಬ್ರುವಾಡ, ತಾಃ ಅಂಕೋಲಾ

2) ಪ್ರದೀಪ್ ಮೂರಾರಿ ಗಾಂವಕರ್,
ಪ್ರಾಯಃ 34 ವರ್ಷ, ಉಃ ಕೂಲಿ ಕೆಲಸ,
ಸಾಃ ಬೊಬ್ರುವಾಡ, ತಾಃ ಅಂಕೋಲಾ

3) ಮೋಹಿನಿ ಮೂರಾರಿ ಗಾಂವಕರ್,
ಪ್ರಾಯಃ 65 ವರ್ಷ, ಉಃ ಗೃಹಿಣಿ,
ಸಾಃ ಬೊಬ್ರುವಾಡ, ತಾಃ ಅಂಕೋಲಾ

4) ಪ್ರೀತಿ ಪ್ರದೀಪ್ ಗಾಂವಕರ್,
ಪ್ರಾಯಃ 34 ವರ್ಷ, ಉಃ ಇಂಜಿನಿಯರ್,
ಸಾಃ ಬೊಬ್ರುವಾಡ, ತಾಃ ಅಂಕೋಲಾ

## ದೋಷಾರೋಪಣೆ

ನಾನು ಅರ್ಪಿತಾ ಬಿ. ಬೆಲ್ಲದ್, ಬಿ.ಕಾಂ..,ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ..

ಅಂಕೋಲಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಬೊಬ್ರುವಾಡ ಗ್ರಾಮದಲ್ಲಿ 1 ರಿಂದ 4 ನೇ ಅರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ ಫಿರ್ಯಾದಿ -ಶ್ರೀಮತಿ ಮಂಜುಳ ಆಶೋಕ ನಾಯ್ಕ ಇವರ ಕುಟುಂಬದವರ ಮೇಲೆ ಗದ್ದೆ ಜಮೀನಿಗೆ ಹೋಗುವ ಕಾಲುದಾರಿಯ ವಿಚಾರವಾಗಿ ದ್ವೇಷದಿಂದ ತೊಂದರೆ ಕೊಡುತ್ತಾ ಬಂದವರು, ದಿಃ 06-08-2024 ರಂದು ಬೆಳಿಗ್ಗೆ 09-15 ಗಂಟೆಗೆ ತಮ್ಮ ಜಮೀನಿಗೆ ಆರೋಪಿತರ ಮನೆ ಎದುರಿನ ಕಾಲುದಾರಿಯಲ್ಲಿ ಹೋಗುತ್ತಿದ್ದ ಪಿರ್ಯಾದಿಯನ್ನು ಉದ್ದೇಶಿಸಿ ಆರೋಪಿತರಾದ ನೀವು "**ಈ ದಾರಿಯಲ್ಲಿ ಓಡಾಡಬೇಡಿ ಅಂತ ನಿಮಗೆ ಹೇಳಿದರೆ ತಿಳಿಯುವುದಿಲ್ಲ ಸೂಳೆ, ಬೇವರ್ಸಿ, ರಂಡೆ**" ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ **ಭಾರತೀಯ ನ್ಯಾಯ ಸಂಹಿತೆ ಕಲಂ. 352 ಸಹಿತ 3(5)** ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಎರಡನೆಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು 1, 3 ಮತ್ತು 4 ನೇ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಪಿರ್ಯಾದಿಗೆ ಕೈಯಿಂದ ಹೊಡೆದು ಸಾದಾ ನೋವುಪಡಿಸಿರುತ್ತೀರಿ. ಆ ಮೂಲಕ **ಭಾರತೀಯ ನ್ಯಾಯ ಸಂಹಿತೆ ಕಲಂ. 115(2) ಸಹಿತ 3(5)** ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಮೂರನೆಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಂದು 2 ನೇ ಆರೋಪಿಯಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಪಿರ್ಯಾದಿಗೆ ಕಾಡು ಜಾತಿಯ ಬಿದಿರಿನ ಕೋಲಿನಿಂದ ಹೊಡೆದಿರುತ್ತೀರಿ. ಆ ಮೂಲಕ **ಭಾರತೀಯ ನ್ಯಾಯ ಸಂಹಿತೆ ಕಲಂ. 118 ಸಹಿತ 3(5)** ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

( ಮೇಲಿನ ಅಪರಾಧಗಳನ್ನು ಆರೋಪಿಯಾದ ನೀನು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 28-10-2025 ರಂದು ಆದೇಶಿಸುತ್ತೇನೆ.)

Sd/-

ಅಂಕೋಲಾ **(ಅರ್ಪಿತಾ ಬಿ. ಬೆಲ್ಲದ್)**

ದಿನಾಂಕಃ 28-10-2025 **ಪ್ರಭಾರ ಹೆ.ಪ್ರ. ದಂ. ನ್ಯಾ.ದಂ., ಅಂಕೋಲಾ.**

**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 29/2025

ಪಿರ್ಯಾದಿಃ ಸರಕಾರ - ವಿರುದ್ಧ - 1) ಮೂರಾರಿ ನಾರಾಯಣ ಗಾಂವಕರ್,

ಪ್ರ 1. ಓದಿ ಹೇಳಲಾದ ಆಪಾದನೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ಆಪಾದನೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ (ಅರ್ಪಿತಾ ಬಿ. ಬೆಲ್ಲದ್)

ದಿನಾಂಕಃ 28-10-2025 ಪ್ರಭಾರ ಹೆ.ಪ್ರ. ದಂ. ನ್ಯಾ.ದಂ., ಅಂಕೋಲಾ.

ಆರೋಪಿಯ ಸಹಿ

**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,**
**ಅಂಕೋಲಾ**

ಸಿಸಿ ನಂಬರ 29/2025

ಪಿರ್ಯಾದಿಃ ಸರಕಾರ - ವಿರುದ್ಧ - 2) ಪ್ರದೀಪ್ ಮೂರಾರಿ ಗಾಂವಕರ್,

ಪ್ರ 1. ಓದಿ ಹೇಳಲಾದ ಆಪಾದನೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ಆಪಾದನೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ (ಅರ್ಪಿತಾ ಬಿ. ಬೆಲ್ಲದ್)

ದಿನಾಂಕಃ 28-10-2025 ಪ್ರಭಾರ ಹೆ.ಪ್ರ. ದಂ. ನ್ಯಾ.ದಂ., ಅಂಕೋಲಾ.

ಆರೋಪಿಯ ಸಹಿ

**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,**
**ಅಂಕೋಲಾ**

ಸಿಸಿ ನಂಬರ 29/2025

ಪಿರ್ಯಾದಿಃ ಸರಕಾರ - ವಿರುದ್ಧ - 3)ಮೋಹಿನಿ ಮೂರಾರಿ ಗಾಂವಕರ್,

ಪ್ರ 1. ಓದಿ ಹೇಳಲಾದ ಆಪಾದನೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ಆಪಾದನೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ (ಅರ್ಪಿತಾ ಬಿ. ಬೆಲ್ಲದ್)

ದಿನಾಂಕಃ 28-10-2025 ಪ್ರಭಾರ ಹೆ.ಪ್ರ. ದಂ. ನ್ಯಾ.ದಂ., ಅಂಕೋಲಾ.

**ಆರೋಪಿಯ ಸಹಿ**

**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 29/2025

ಪಿರ್ಯಾದಿಃ ಸರಕಾರ - ವಿರುದ್ಧ - 4) ಪ್ರೀತಿ ಪ್ರದೀಪ್ ಗಾಂವಕರ್,

ಪ್ರ 1. ಓದಿ ಹೇಳಲಾದ ಆಪಾದನೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ಆಪಾದನೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ (ಅರ್ಪಿತಾ ಬಿ. ಬೆಲ್ಲದ್)

ದಿನಾಂಕಃ 28-10-2025 ಪ್ರಭಾರ ಹೆ.ಪ್ರ. ದಂ. ನ್ಯಾ.ದಂ., ಅಂಕೋಲಾ.

**ಆರೋಪಿಯ ಸಹಿ**